ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ಹೊನ್ನಾಳಿ
ಸಿ.ಸಿ.ನಂ: 534 ಃ 2017

ಪಿರ್ಯಾದಿಃ- ರಾಜ್ಯ- ಹೊನ್ನಾಳಿ ಆರಕ್ಷಕ ಠಾಣೆ.

ವಿರುದ್ದ

ಆರೋಪಿಃ- ಶ್ರೀ ಹರೀಶ್‌ಬಾಬು ಆರ್. ಬಿನ್ ರಾಜೇಂದ್ರ, ವಯಸ್ಸು 36 ವರ್ಷ, ಡ್ರೈವರ್ ಕೆಲಸ, ವಾಸಃ # 34, 5ನೇ ಕ್ರಾಸ್, 3ನೇ ಮೇನ್, ಅಂಬೇಡ್ಕರ್ ನಗರ, ವಿಜಯಪುರ, ಬೆಂಗಳೂರು.

ಆಪಾದನೆ.

ಮೇಲ್ಕಂಡ ಪ್ರಕರಣದಲ್ಲಿ ಆರೋಪಿಯಾದ ನೀವು ದಿನಾಂಕ 09-12-2016 ರಂದು ಬೆಳಗ್ಗೆ 7-45 ಗಂಟೆಗೆ ಸಮಯದಲ್ಲಿ ನಿಮ್ಮ ಬಾಬ್ತು ಕೆಎ-53ಸಿ4191ನೇ ಕಾರನ್ನು ಹೊನ್ನಾಳಿ ತಾಲ್ಲೂಕು ತಕ್ಕನಹಳ್ಳಿ ಗ್ರಾಮದ ಹತ್ತಿರ ಬೋರನಹಳ್ಳದ ಸೇತುವೆಯ ಮೇಲೆ ಹೊನ್ನಾಳಿ-ಬಸವಾಪಟ್ಟಣ ರಸ್ತೆಯಲ್ಲಿ ಬಸವಪಟ್ಟಣ ಕಡೆಯಿಂದ ಹೊನ್ನಾಳಿ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಿಮ್ಮ ಎದುರಿಗೆ ಹೊನ್ನಾಳಿ ಕಡೆಯಿಂದ ಬಸವಪಟ್ಟಣ ಕಡೆಗೆ ಹೋಗುತ್ತಿದ್ದ ಕೆಎ-17ಇವಿ-4627ನೇ ಮೋಟಾರ್ ಸೈಕಲ್‌ಗೆ ಡಿಕ್ಕಿಪಡಿಸಿರುತ್ತೀರಿ ಅಂತ ನಿಮ್ಮ ವಿರುದ್ದ ಭಾ.ದಂ.ಸಂ.ಕಲಂ 279 ರಡಿ ಶಿಕ್ಷಾರ್ಹ ಅಪರಾಧದ ಆಪಾದನೆಯಿರುತ್ತದೆ.

ಮೇಲೆ ಹೇಳಿದ ಸಮಯ, ದಿನಾಂಕ ಹಾಗೂ ಸ್ಥಳದಲ್ಲಿ ನೀವು ನಿಮ್ಮ ವಾಹನವನ್ನು ಮೋಟಾರ್ ಸೈಕಲ್‌ಗೆ ಡಿಕ್ಕಿಪಡಿಸಿದ್ದರಿಂದ ಸದರಿ ಮೋಟಾರ್ ಸೈಕಲ್ ಸಮೇತ ಬೈಕ್ ಸವಾರ ಸುರೇಶನಾಯ್ಕ ಎಂಬುವವನು ಕೆಳಗೆ ಬಿದ್ದಿದ್ದರಿಂದ ಅವರ ಬಲಕಾಲು ಪಾದದಿಂದ ಮಂಡಿಯವರೆಗೆ ರಕ್ತಗಾಯವಾಗಿ ಎಡ ಕಿವಿಯಲ್ಲಿ ರಕ್ತ ಬಂದಿದ್ದರಿಂದ ಇವರನ್ನು ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆಗೆ, ನಂತರ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆ, ನಂಜಪ್ಪ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿ ನಂತರ ಹೆಚ್ಚಿನ ಚಿಕಿತ್ಸೆಗೆ ಮಂಗಳೂರು ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಿದ್ದು ಸುರೇಶನಾಯ್ಕ ಇವರು ಚಿಕಿತ್ಸೆ ಫಲಕಾರಿಯಾಗದೇ ದಿನಾಂಕಃ 21-12-2016 ರಂದು ಬೆಳಗ್ಗೆ 7-00 ಘಂಟೆ ಸಮಯದಲ್ಲಿ ಮೃತಪಟ್ಟಿರುತ್ತಾರೆ ಅಂತ ನಿಮ್ಮ ವಿರುದ್ದ ಭಾ.ದಂ.ಸಂ.ಕಲಂ 304(ಎ) ರಡಿ ಶಿಕ್ಷಾರ್ಹ ಅಪರಾಧದ ಆಪಾದನೆಯಿರುತ್ತದೆ.

ಪ್ರಶ್ನೆ:1:ಓದಿ ಹೇಳಿದ ಆಪಾದನೆ ತಿಳಿಯಿತೆ?

ಉತ್ತರ:

ಪ್ರಶ್ನೆ:2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?
ಉತ್ತರ:

**(ಈ ಮೇಲಿನ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆತನಿಗೆ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು)**

ಸ್ಥಳ: ಹೊನ್ನಾಳಿ
ದಿ: -2017 ಪ್ರ. ದ. ನ್ಯಾ. ದಂ. ಹೊನ್ನಾಳಿ.